# ಆರ್.ಪಿ.ಎ. ಪ್ರಥಮ ದರ್ಜೆ ಕಾಲೇಜು

**ರಾಜಾಜಿನಗರ, ಬೆಂಗಳೂರು- 10**

# ಕನ್ನಡ ವಿಭಾಗ ಹಾಗೂ ಕನ್ನಡ ಸಂಘ

## ವರದಿ - 2025-2026

ಆರ್‌ಪಿಎ ಪ್ರಥಮ ದರ್ಜೆ ಕಾಲೇಜು ಕನ್ನಡ ವಿಭಾಗ ಹಾಗೂ ಅಖಿಲಾ ಭಾರತೀಯ ರಾಷ್ಟ್ರೀಯ ಶೈಕ್ಷಣಿಕ ಮಹಾಸಂಘ ಇವರ ಸಹಯೋಗದಲ್ಲಿ ಭಾರತದ ಮೂವರು ಮಹಾನ್ ಮಹಿಳಾ ಹೋರಾಟಗಾರರ ಬಗ್ಗೆ ದಿನಾಂಕ: ೧೦/೦೯/೨೦೨೫ ರಂದು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಸಂಪನ್ಮೂಲ ವ್ಯಕ್ತಿಗಳಾದ ರಾಜಾಜಿನಗರದ ಬಸವೇಶ್ವರ ಪದವಿ ಕಾಲೇಜಿನ ಉಸ್ತುವಾರಿ ಪ್ರಾಂಶುಪಾಲರಾದ ಪ್ರೊ. ಗಿರಿಶ್ ಅವರು ಕಿತ್ತೂರ ರಾಣಿ ಚೆನ್ನಮ್ಮ, ರಾಣಿ ಅಬ್ಬಕ್ಕ ಹಾಗೂ ಅಹಲ್ಯ ಹೊಳ್ಕರ್ ಅವರ ಜೀವನ ಮತ್ತು ಹೋರಾಟದ ಹಾದಿಯನ್ನು ಎಳೆ ಎಳೆಯಾಗಿ ಬಿಚ್ಚಿಟ್ಟರು. ಇಂದಿನ ವಿದ್ಯಾರ್ಥಿಗಳು ಅವರಂತೆ ದೇಶ ಪ್ರೇಮಿಗಳಾಗಬೇಕು ಎಂದು ಕರೆ ನೀಡಿದರು.

ಕಾಲೇಜಿನ ಪ್ರಾಂಶುಪಾಲರಾದ ಡಾ.ತೇಜಸ್ವಿನಿ ಹೆಚ್. ಎಮ್ ರವರು ಅಧ್ಯಕ್ಷತೆಯನ್ನು ವಹಿಸಿ ಮಾತಾನಾಡುತ್ತ ಸ್ವಾತಂತ್ರ್ಯ ಸಂಗ್ರಾಮದ ತ್ಯಾಗ ಬಲಿದಾನದಲ್ಲಿ ಮಹಿಳೆಯರು ತಮ್ಮದೆ ಕೊಡುಗೆ ನೀಡಿದ್ದಾರೆ. ಅವರ ಆದರ್ಶಗಳನ್ನು ಮೈಗೂಡಿಸಿಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಕರೆ ಕೊಟ್ಟರು. ಕಾರ್ಯಕ್ರಮಕ್ಕೆ ಸಂಸ್ಕೃತ ವಿಭಾಗದ ಪ್ರಾಧ್ಯಾಪಕರಾದ ವೀಣಾ ಬದ್ರಿನಾಥ್ ಪ್ರಾರ್ಥನೆ ಮಾಡಿದರೆ ಕನ್ನಡ ವಿಭಾಗದ ಮುಖ್ಯಸ್ಥರಾದ ದೇವರಾಜೇಗೌಡ ಕಾರ್ಯಕ್ರಮವನ್ನು ನೆಡೆಸಿಕೊಟ್ಟರು.

**ದಿನಾಂಕ : 16 ಫೆಬ್ರುವರಿ 2026 ರಂದು ಪ್ರಥಮ ವರ್ಷದ ಪದವಿ ವಿದ್ಯಾರ್ಥಿಗಳಿಗೆ ತರಗತಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿತ್ತು.**

ತರಗತಿಯ ಚಟುವಟುಕೆಗಳು ವಿದ್ಯಾರ್ಥಿಗಳ ಕಲಿಕೆಯನ್ನು ಆಸಕ್ತಿದಾಯಕ, ಕ್ರಿಯಾತ್ಮಕ ಹಾಗೂ ಅರ್ಥಪೂರ್ಣಗೊಳಿಸುತ್ತವೆ. ಸೃಜನಶೀಲತೆಯನ್ನು ಉತ್ತೇಜಿಸಿ ವಿದ್ಯಾರ್ಥಿಗಳಲ್ಲಿ ವಿಮರ್ಶಾತ್ಮಕ ಚಿಂತನೆ ಹಾಗೂ ಸಹಭಾಗಿತ್ವವನ್ನು ಬೆಳೆಸುತ್ತವೆ. ವಿದ್ಯಾರ್ಥಿಗಳ ಅಭಿವ್ಯಕ್ತಿಶೀಲ ಗುಣಧರ್ಮ ಹಾಗೂ ಚಲನಶೀಲ ಗುಂಪುಕಾರ್ಯವನ್ನು ಬೆಂಬಲಿಸಿ, ಅನ್ವೇಷಿಸುವಂತಹ ಕೆಲಸವನ್ನು ಈ ರೀತಿಯ ತರಗತಿ ಚಟುವಟಿಕೆಗಳು ಮಾಡುತ್ತವೆ. ತರಗತಿಯಲ್ಲಿ ವಿದ್ಯಾರ್ಥಿಗಳು ಚುರುಕಾಗಿ ಇರುವಲ್ಲಿ ಚಟುವಟಿಕೆಗಳ ಪಾತ್ರ ಹಿರಿದು. ಸ್ಪರ್ಧಾತ್ಮಕ ಮನೋಭಾವ ಬೆಳೆಸಿ, ವೇದಿಕೆಯ ಪರಿಪೂರ್ಣ ಬಳಕೆಯ ಶೈಲಿಯನ್ನೂ ಉತ್ತೇಜಿಸುತ್ತವೆ. ಕನ್ನಡವು ಎಂಟು ಜ್ಞಾನಪೀಠ ಪ್ರಶಸ್ತಿಗಳ ಗರಿಮೆ ಪಡೆದುಕೊಂಡ ಶಾಸ್ತ್ರೀಯ ಭಾಷೆಯಾಗಿದೆ. ಇಂದಿನ ತಂತ್ರಜ್ಞಾನದ ಯುಗದಲ್ಲಿ ಇಂಗ್ಲೀಷ್ ಮಾಧ್ಯಮದ ಅಬ್ಬರ ಹಾಗೂ ಕನ್ನಡ ಮಾತೃಭಾಷಾ ಜನರ, ಭಾಷಾ ವಿಮುಖತೆಯಿಂದಾಗಿ ಸಂಕೀರ್ಣ ಸ್ಥಿತಿಯನ್ನು ತಲುಪಿದೆ. ಹಾಗಾಗಿ ಜಾಗತೀಕರಣದ ಯುಗದಲ್ಲಿ ಕನ್ನಡ ಭಾಷೆ ತನ್ನ ಅಸ್ತಿತ್ವ ಉಳಿಸಿಕೊಳ್ಳುವಲ್ಲಿ ಹೆಣಗಾಡುತ್ತಿದೆ. ಈ ಪ್ರಸ್ತುತ ಸ್ಥಿತಿಯನ್ನು

ಗಮನದಲ್ಲಿಟ್ಟುಕೊಂಡು ವಿದ್ಯಾರ್ಥಿಗಳಲ್ಲಿ ಭಾಷಾಭಿಮಾನ ಉಳಿಸುವ, ಬೆಳೆಸುವ ನಿಟ್ಟಿನಲ್ಲಿ ಹಮ್ಮಿಕೊಂಡ ಚಟುವಟಿಕೆಯನ್ನು ಯಶಸ್ವಿಯಾಗಿ ಪೂರೈಸಲಾಯಿತು. ಅಂತಿಮವಾಗಿ ಕಲಿಕಾ ಫಲಿತವು ಅತ್ಯುತ್ತಮವಾಗಿತ್ತು.

ಅನ್ಯ ಭಾಷೆಯ ಪದಗಳನ್ನು ಬಳಸದೆ ಕೇವಲ ಕನ್ನಡ ಭಾಷೆಯಲ್ಲಿಯೇ ವಿದ್ಯಾರ್ಥಿಗಳು ತಮ್ಮ ಆಯ್ಕೆಯ ವಿಷಯಗಳನ್ನು ಕುರಿತು ಸೊಗಸಾಗಿ ಮಾತನಾಡಿದರು. ಪ್ರಥಮ ವರ್ಷದ ಬಿ.ಕಾಂ, ಬಿಬಿಎ, ಬಿಸಿಎ ಹಾಗೂ ಬಿ.ಎಸ್ಸಿ ವಿದ್ಯಾರ್ಥಿಗಳ ತುಂಬಾ ಉತ್ಸುಕತೆಯಿಂದ ಪಾಲ್ಗೊಂಡು ತಮ್ಮ ಆಸಕ್ತಿಯ ಆಯ್ಕೆಯ ವಿಷಯವನ್ನು ಕನ್ನಡ ಭಾಷೆಯಲ್ಲಿಯೇ ಮಾತನಾಡಿ ಉಪನ್ಯಾಸಕರ ಮೆಚ್ಚುಗೆಗೆ ಪಾತ್ರರಾದರು.